ಖೈರೆಯವರು ಒಬ್ಬ ಅಪರೂಪದ ಚಿಂತಕ ಮತ್ತು ಸಂಶೋಧಕರೆಂದು ಪ್ರಸಿದ್ಧಿಗೆ ಬಂದಿದ್ದರು. ಅದು ಇರಾವತಿ ಕರ್ವೆಯವರ ಸರ್ವೋತ್ತಮ ಲೇಖನಗಳ ಎತ್ತರವನ್ನು ತಲುಪಿದೆ ಅಥವಾ ಇದು ಕರ್ವೆಯವರ ಲೇಖನಕ್ಕಿಂತ ಎತ್ತರದಲ್ಲಿ ಇದೆ ಎಂದು ಮಹಾರಾಷ್ಟದ ಪ್ರಸಿದ್ಧ ಲೇಖಕ ಪ್ರೊ. ಲೀಲಾ ಅರ್ಜುನವಾಡಕರಂಥವರು ಹೇಳಿದ ಮಾತನ್ನು ಸಹ ಶ್ರೀನಿವಾಸರಾಯರು ಖೈರೆಯವರನ್ನು ಪರಿಚಯಿಸುವ ಸಂದರ್ಭದಲ್ಲಿ ಪ್ರಸ್ತುತಪಡಿಸಿದ್ದರು.

ಖೈರೆಯವರು ತಮ್ಮ ಉಪನ್ಯಾಸದಲ್ಲಿ ಸಂಶೋಧನೆಗೆ ಸಂಬಂಧಿಸಿದ ಕೆಲವು ಮಹತ್ವದ ವಿಚಾರಗಳನ್ನು ಆಡಿದ್ದರು.

ಮಿಥ್ಯೆಗಳ ಹಿನ್ನೋಟ ಹಾಗೂ ಮಿಥ್ಯೆಗಳ ಗ್ರಹಿಕೆ ಇವೆರಡರಲ್ಲೂ ಸಂಶೋಧನೆಯಿದೆ. ಸಂಕಲನವಿಲ್ಲ. ಮಿಥ್ಯೆ ಹಾಗೂ ಮಿಥ್ಯಕಥೆಗಳ ರೂಪುಗೊಳ್ಳುವಿಕೆಗೆ ನೆರವಾಗುವ ಮೆದುಳಿನ ಸಾಮರ್ಥ್ಯವು ಸಾಹಿತ್ಯಕ್ಕೂ ಪ್ರಯೋಜನಕಾರಿಯಾದುದು. ಇಂಥ ಸಂಶೋಧನೆಯು ಒಂದೆಡೆ ಸಂಸ್ಕೃತಿ ಹಾಗೂ ಸಾಹಿತ್ಯದೊಡನಾದರೆ ಇನ್ನೊಂದೆಡೆಗೆ ವಿಜ್ಞಾನ ಹಾಗೂ ವ್ಯವಹಾರಗಳ ಹುಟ್ಟು ವಿಕಾಸಗಳೊಡನೆ ನಂಟುಳ್ಳದ್ದು. ಹೀಗಾಗಿ ಈ ಸಂಶೋಧನೆಗಳು ಹಲವು ವಿಧವಾಗಿವೆ. ಶುರುವಿನಿಂದಲೇ ಇಂಥವು 'ಸತ್ಯಕಥಾ', 'ಮೌಜ' ಮೊದಲಾದ ರಸಿಕ ಮನ್ನಣೆ ಹಾಗೂ ವಿದ್ವಾಂಸ ಮನ್ನಣೆಯನ್ನು ಪಡೆದ ಸಂಚಿಕೆಗಳಲ್ಲಿ ಪ್ರಕಟವಾದ ಕಾರಣ ಅವು ಮರಾಠಿ ಅಧ್ಯಯನಶೀಲರ ಅರಿವಿನ ಮಟ್ಟವನ್ನು ತಲುಪಿತ್ತಾದರೂ ಅವರು ಅವನ್ನು ಕುರಿತು ಕೂಲಂಕಷವಾಗಿ ಪರವಿರೋಧದ ಯೋಚನೆಯನ್ನು ಮಾಡಿಲ್ಲ. ಅವು ವಿಶ್ವವಿದ್ಯಾಲಯಗಳ ಅಧ್ಯಯನ ಕ್ರಮ, ಸಂಶೋಧನೆ ಹಾಗೂ ಚರ್ಚೆಗಳೊಂದಿಗೆ ಬೌದ್ಧಿಕ ಹೆಣಗಾಟವನ್ನು ಮಾಡುವ ಮಟ್ಟಿಗೆ ತಲುಪಿಲ್ಲ. ಇದರಿಂದಾಗಿ ಈ ಸಂಶೋಧನೆಗಳ ಫಲಿತಾಂಶಗಳನ್ನು ಸ್ವೀಕರಿಸುವ ಮಾತಂತೂ ದೂರವೇ ಉಳಿಯಿತು. ಮಿಥ್ಯೆಗಳ ಈ ಸಾಹಿತ್ಯವು ಸಂಸ್ಕೃತಿಕಥೆ, ಅರ್ಥಾಂತರಗಳು, ಹೊಳಪಿನ ಕಲ್ಪನೆಗಳನ್ನೆಲ್ಲ 'ಮಿಥಿಕ್' ಎಂದುಕೊಂಡು, ಅವುಗಳ ಸಂಕಲನ, ರಸಗ್ರಹಣ ಅಥವಾ ಅಂಥವುಗಳ ಪರಿಧಿಯಲ್ಲಿ ತಡವರಿಸುತ್ತಿದೆ. ಸಾಹಿತ್ಯದ ದೇಶಿತನ ಅಥವಾ ಸಮಾಜ ಪರಿವರ್ತನೆಗಳನ್ನು ಮುಖ್ಯ ಶಬ್ದಗಳನ್ನಾಗಿ ಮಾಡಿಕೊಂಡು ಕಥೆಗಳ ಪಠ್ಯಗಳನ್ನು ಅರ್ಥೈಸುತ್ತ ಅವುಗಳನ್ನು ಬಳಸುವ ಯತ್ನ ನಡೆಯುತ್ತಿದೆ. ಈ ದೃಷ್ಟಿಯಿಂದ ಮೌಖಿಕ ಪಠ್ಯಗಳ ಹಿನ್ನೆಲೆ ಹಾಗೂ ಮೂಲವನ್ನು ತಲುಪಬಲ್ಲ ಗ್ರಹಿಕೆಯ ಬಗೆಗಿನ ಒತ್ತಾಯವನ್ನು ಒಂದು ಬಗೆಯ ತೊಡಕು ಎಂದು ಭಾವಿಸಲಾಗುತ್ತದೆ.

ಇಂಥ ವಾತಾವರಣದಲ್ಲಿ ಬೆಳೆಯುತ್ತಿರುವ ಹೊಸ ತಲೆಮಾರು ಈ ಸಂಶೋಧನೆಯ ತೆರೆದ ಗಾಳಿಯ ಆರೋಗ್ಯಕರವಾದ ಉಸಿರನ್ನು ಹೀರಿಕೊಳ್ಳಲೆಂದು ಅದು ಇನ್ನೊಮ್ಮೆ ಅದರೆದುರು ಬರುತ್ತಿದೆ. ಇಂಗ್ಲಿಷ್ ಲೇಖಕರ ಆಧಾರ ಇಲ್ಲವೇ ಅವರ ಅವತರಣಿಕೆಗಳನ್ನು ತೆಗೆದುಕೊಂಡು ಅದನ್ನು ಸಿಂಗರಿಸಲಾಗಿಲ್ಲ. ಅದರ ಮಾದರಿ ಅಪ್ಪಟ ದೇಸಿಯಾದರೂ ಅದರ ಗುಣ ಮಾತ್ರ ಅಭಿಜಾತ ಸಂಶೋಧನೆಯದ್ದು. ಅದು ಭಾರತವಿದ್ಯೆಯ ಯೂರೋಪು ಕೇಂದ್ರದ ಸ್ವರೂಪವನ್ನು ಬದಲಾಯಿಸಿ ಹೊಸ ಭಾರತವಿದ್ಯೆಯನ್ನು ಕಟ್ಟಿ ನಿಲ್ಲಿಸುವ ಅಂತಃಸಾಮರ್ಥ್ಯವನ್ನು ಹೊಂದಿದೆ. ಕಳೆದ ತಲೆಮಾರು ರಾಜಕೀಯ ಸ್ವಾತಂತ್ರವನ್ನು ಪಡೆದದ್ದರಿಂದ ಈ ಶತಮಾನದ ತಲೆಮಾರು ಮಾನಸಿಕ ಸ್ವಾತಂತ್ರವನ್ನು ವಶಪಡಿಸಿಕೊಳ್ಳಬೇಕು. ಅದಕ್ಕಾಗಿ ಸಮಾಜದ ಮನಸ್ಸಿನ ಮೇಲೆ ರಾಜ್ಯವನ್ನು ಆಳುತ್ತಿರುವ ಸಂಸ್ಕೃತಿ ಕಥೆಗಳನ್ನು ಬೇರುಸಹಿತ ಅರ್ಥಮಾಡಿಕೊಳ್ಳುವುದು ಅವಶ್ಯಕ. ಅದನ್ನು ಮಾಡಿಕೊಳ್ಳುವ ಕೆಲವು ದಿಕ್ಕುಗಳು, ಕೆಲವು ದಾರಿಗಳು ಹಾಗೂ ಕೆಲವು ಸಾಧನೆಗಳು ಈ ಸಂಶೋಧನೆಯಲ್ಲಿ ಖಂಡಿತ ದೊರೆಯುವುವು. ಹೊಸ ತಲೆಮಾರು ಅವುಗಳಿಂದ ಲಾಭ ಪಡೆಯಬೇಕು. ಭವಿಷ್ಯ ಕಾಲವು ಖಂಡಿತ ಹೊಸ ತಲೆಮಾರಿನದು.

ಈ ರೀತಿಯ ಖೈರೆ ಅವರ ಉಪನ್ಯಾಸವು ಮುಗಿದ ತಕ್ಷಣ ವೇದಿಕೆಯ ಇದಿರಲ್ಲೇ ಕುಳಿತಿದ್ದ ಪಾಟೀಲರು ವೇದಿಕೆ ಹತ್ತಿ ಖೈರೆಯವರಿಗೆ ಹಸ್ತಲಾಘವ ನೀಡಿ ಅಭಿನಂದಿಸಿದರು. 'ತುಂಬಾ ಮಹತ್ವದ ವಿಚಾರಗಳನ್ನು ತಾವು ಹೇಳಿದ್ದೀರಿ. ನನಗೆ ತುಂಬಾ ಖುಷಿಯಾಗಿದೆ' ಎಂದವರೇ ವೇದಿಕೆಯಲ್ಲಿದ್ದ ಶ್ರೀನಿವಾಸರಾಯರ ಕೈಕುಲುಕಿ, 'ಒಳ್ಳೆ ವ್ಯಕ್ತಿಯನ್ನು ಆಯ್ಕೆ ಮಾಡಿದ್ದೀರಿ. ನಾನು ಬೆಳಗಾವಿಯವ. ನನಗೆ ಮರಾಠಿ ಸ್ವಲ್ಪ ಗೊತ್ತು. ನಾನು ಅವರನ್ನು ಮರಾಠಿಯಲ್ಲೇ ಅಭಿನಂದಿಸಿದೆ. ಭಾಷೆಗಳ ವಿಚಾರದಲ್ಲಿ ದುರಭಿಮಾನ ಇರಬಾರದು. ವಿಚಾರಗಳು ಯಾವ ಭಾಷೆಯದ್ದೇ ಆಗಿರಲಿ. ಅದರಲ್ಲಿ ಸತ್ವ ಮತ್ತು ಮಹತ್ವ ಇದ್ದರೆ ಅದನ್ನು ಸ್ವೀಕರಿಸಬೇಕು! ಇದೇ ಉದ್ದೇಶದಿಂದ ನಮ್ಮ ಬಸವಸಮಿತಿಯವರು ವಚನಕಾರರ ವಚನಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸಬೇಕು ಎಂದು ಆಗಲೇ ಯೋಚಿಸಿದ್ದಾರೆ. ಇದು ಒಂದು ಒಳ್ಳೆಯ ಯೋಚನೆ. ಕನ್ನಡದ ಯೋಚನೆಗಳು ದೇಶದಲ್ಲಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲೂ ಪ್ರಸಾರವಾಗಬೇಕು. ಅದರ ಮಹತ್ವ ಇಡೀ ಜಗತ್ತಿಗೆ ಗೊತ್ತಾಗಬೇಕು' ಎಂದು ಹೇಳಿ, 'ನೀವು ನನ್ನ ಯೋಚನೆಯನ್ನು ಅದ್ಭುತವಾಗಿ ಕಾರ್ಯಗತಗೊಳಿಸುತ್ತಿದ್ದೀರಿ. ಐ ಆಮ್ ವೆರಿ ಪ್ರೌಡ್ ಆಫ್ ಯು' ಎಂದು ಅಭಿನಂದಿಸಿದರು.

ರಾಯರಿಗೆ ವೇದಿಕೆಯಲ್ಲೇ ಕಾಲೇಜ್ ಟ್ರಸ್ಟಿನ ಅಧ್ಯಕ್ಷರಿಂದ ಮೆಚ್ಚುಗೆ ಸಿಕ್ಕಿದ್ದು ತುಂಬ ಸಂತೋಷ ನೀಡಿತ್ತು. ಅವರು 'ಥ್ಯಾಂಕ್ ಯೂ ಸರ್, ಥ್ಯಾಂಕ್ ಯೂ ಸರ್' ಎಂದು ಎರಡೆರಡು ಸಲ ಕೃತಜ್ಞತೆ ಸೂಚಿಸಿ ಖೈರೆಯವರನ್ನು ಅವರು ಉಳಿದುಕೊಂಡಿದ್ದ ಹೋಟೆಲಿಗೆ ಕರೆದೊಯ್ದಿದ್ದರು.

ಎರಡು ದಿನ ಮೇಲೆ ರಾಯರು ಪಾಟೀಲರಿಗೆ ಫೋನು ಮಾಡಿ 'ಸರ್ ನನಗೊಂದು ನಿಮ್ಮ ಅಪಾಯಿಂಟ್‌ಮೆಂಟ್ ಬೇಕಿತ್ತು! ಯಾವಾಗ ಎಂದು ಹೇಳಬಹುದಾ ತಾವು?' ಎಂದು ವಿನಂತಿಸಿದರು.

ಪಾಟೀಲರು, 'ಈ ವಾರ ನಾನು ಪೂರ್ತಿ ಊರಲ್ಲೇ ಇದ್ದೇನೆ. ನಾಳೆ ಸಂಜೆ ಆರು ಗಂಟೆಗೆ ಬನ್ನಿ. ನಿಮ್ಮ ಜೊತೆ ಕುಳಿತು ಕಾಫಿ ಕುಡಿಯಬೇಕು ಎಂದು ನನಗೂ ಆಸೆ ಇದೆ' ಎಂದು ನಕ್ಕರು.

'ಥ್ಯಾಂಕ್ ಯೂ ಸರ್' ಎಂದು ಹೇಳಿದ ರಾಯರು ಅಳುಕುತ್ತಲೇ 'ಸರ್, ನನ್ನ ಜೊತೆ ನಮ್ಮ ಕಾಲೇಜಿನ ಇಂಗ್ಲಿಷ್ ಲೆಕ್ಚರರ್ ಸತೀಶ ಕುಲಕರ್ಣಿ ಮತ್ತು ಅವರು ಹೊಸತಾಗಿ ಮದುವೆಯಾದ ಅವರ ಹೆಂಡತಿಯೂ ನಿಮ್ಮನ್ನು ನೋಡಬಯಸಿದ್ದಾರೆ' ಎಂದರು.

'ಓ ಗುಡ್! ಬರಲಿ ಬರಲಿ' ಎಂದು ಹೇಳಿದ ಪಾಟೀಲರು, 'ಅದೇನ್ರಿ ರಾವ್, ಹೊಸತಾಗಿ ಮದುವೆಯಾದ ಹೆಂಡತಿ ಅಂತ ಹೇಳುತ್ತೀರಿ? ಮದುವೆ ಎನ್ನುವುದೇ ಹೊಸತು ಎಂದಾದ ಮೇಲೆ ಅದಕ್ಕೆ ಯಾಕ್ರೀ ಈ ವಿಶೇಷಣೆ?' ಎಂದು ನಕ್ಕರು.

'ಹೌದು ಸರ್ ಗಡಿಬಿಡಿಯಲ್ಲಿ ಹೇಳಿದೆ'.

'ಇರಲಿ ಬಿಡಿ, ಬನ್ನಿ'.

ಮರುದಿನ ರಾಯರು ಸಂಜೆ ಹೊತ್ತಿಗೆ ಸತೀಶ ದಂಪತಿಯ ಜೊತೆ ಪಾಟೀಲರ ಮನೆ ಮೆಟ್ಟಿಲನ್ನು ತುಳಿದರು. ಆರಾಮ ಕುರ್ಚಿಯಲ್ಲಿ ಕುಳಿತಿದ್ದ ಪಾಟೀಲರು 'ಎಸ್, ಬನ್ನಿ ಬನ್ನಿ' ಎಂದು ಕುಳಿತಲ್ಲಿಂದಲೇ ಸ್ವಾಗತಿಸಿ ಇದಿರಿಗಿದ್ದ ಆಸನಗಳನ್ನು ತೋರಿಸಿದರು. ಮೂವರೂ ಸಂಕೋಚ ಮತ್ತು ಗೌರವ ಭಾವದಿಂದ ಕುಳಿತುಕೊಳ್ಳುತ್ತಿದ್ದಂತೆ ಪಾಟೀಲರು ಹೆಂಡತಿಯನ್ನು ಕರೆದು 'ರಾಯರು ಬಂದಿದ್ದಾರೆ ನೋಡು. ಹಿ ಈಸ್ ಪ್ರೌಡ್ ಆಫ್ ಅವರ್ ಕಾಲೇಜ್' ಎಂದು ಹೇಳಿದಾಗ ರಾಯರು ಸಂಕೋಚಪಟ್ಟು ಎರಡೂ ಕೈ ಜೋಡಿಸಿದರು. ಪಾಟೀಲರು ಆ ಮಾತಿನ ಬೆನ್ನಿನಲ್ಲೇ 'ಇವರು ಸಂಘಟಿಸುವ ಸ್ಪೀಚ್‌ಗೆ ನಿನ್ನನ್ನೂ ಒಮ್ಮೆ ಕರೆದೊಯ್ಯುತ್ತೇನೆ' ಎಂದು ತನ್ನ ಹೆಂಡತಿಗೆ ಆಶ್ವಾಸನೆ ನೀಡಿ, ಅತಿಥಿಗಳಿಗೆ ತನ್ನ ಹೆಂಡತಿಯನ್ನು ಪರಿಚಯಿಸುತ್ತಾ 'ಇವಳಿಗೆ ಓದುವುದರಲ್ಲಿ ತುಂಬಾ ಆಸಕ್ತಿ ಇದೆ ಮಿ. ರಾವ್. ಈಕೆ ಮರಾಠಿ ಮೂಲದವಳು! ಮರಾಠಿ ಪುಸ್ತಕಗಳನ್ನು ತುಂಬಾ ಓದುತ್ತಾಳೆ. ಖೈರೆಯವರ ಕಾರ್ಯಕ್ರಮಕ್ಕೆ ಬರಬೇಕೆಂಬ ಆಸೆ ಅವಳಿಗೆ ತುಂಬಾ ಇತ್ತು. ಬಟ್ ಆ ಸಂದರ್ಭದಲ್ಲಿ ಆಕೆಗೆ ಜ್ವರ ಬಂದದ್ದರಿಂದ ಬರಲಾಗಲಿಲ್ಲ ನೋಡಿ' ಎಂದರು. ರಾಯರು 'ಹೌದಾ?' ಎಂದು ಮುಗುಳ್ನಕ್ಕರು. ಪಾಟೀಲರು ಅಷ್ಟರಲ್ಲೇ 'ನೀವೇನು ತೆಗೆದುಕೊಳ್ಳುತ್ತೀರಿ? ಕಾಫಿಯೋ ಟೀಯೋ?' ಎಂದು ಪ್ರಶ್ನಿಸಿದರು.

ಮೂವರೂ ಸಂಕೋಚದಿಂದ 'ಏನೂ ಬೇಡಿ ಸರ್' ಎನ್ನುತ್ತಿದ್ದರೂ ಪಾಟೀಲರು 'ಕಾಫಿ ಆಗಬಹುದು ತಾನೇ? ನಾನು ಕಾಫಿಯನ್ನೇ ಕುಡಿಯುವುದು. ನಮ್ಮ ಬಟ್ಲರ್ ಬ್ರೂ ಕಾಫಿಗಿಂತ ಒಳ್ಳೆ ಕಾಫಿ ಮಾಡಿಕೊಡುತ್ತಾನೆ' ಎಂದರು.

ಸ್ವಲ್ಪ ಹೊತ್ತು ಅದು ಇದು ಮಾತುಕತೆ ಯಾಯಿತು. ಅಷ್ಟರಲ್ಲಿ ಅಡುಗೆ ಭಟ್ಟ ಕುರುಕುರು ಚಕ್ಕುಲಿ ಮತ್ತು ಬೆಳಗಾವಿ ಭಾಗದ 'ಕರದಂಟು' ತುಂಬಿದ ಎರಡು ಬಟ್ಟಲುಗಳನ್ನು ತಂದಿಟ್ಟ. ಪಾಟೀಲರು 'ಇದು ಕರದಂಟು ಅಂತ. ಬೆಳಗಾವಿ ಕಡೆಯ ಸ್ವೀಟ್. ನಾನು ಆ ಕಡೆ ಹೋದಾಗಲೆಲ್ಲ ನನ್ನ ಹೆಂಡತಿಗೆ ಇದು ಇಷ್ಟ ಅಂತ ತರುತ್ತಲೇ ಇರುತ್ತೇನೆ' ಎಂದು 'ಕರದಂಟ'ನ್ನು ಹೇಗೆ